# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರಿನ ಐಐಐ–ಟಿ ಯಲ್ಲಿ ಸೆಂಟರ್ ಫಾರ್ ಮೆಷಿನ್ ಇಂಟೆಲಿಜೆನ್ಸ್ ಮತ್ತು ರೊಬೋಟಿಕ್ಸ್ ಕೇಂದ್ರದ ಸ್ಥಾಪನೆ.

ಓದಲಾಗಿದೆ: 1. ದಿನಾಂಕ 9ನೇ ಮೇ, 2017 ಸಂಖ್ಯೆ: ಐಟಿಡಿ 76 ಎಡಿಎಂ 2017ರ ಸರ್ಕಾರಿ ಆದೇಶ.

2. ದಿನಾಂಕ 15.06.2017 ಸಂಖ್ಯೆ: ಐಟಿಬಿಟಿ/ಆಡಳಿತ/34/ಆಯವ್ಯಯ / ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶಕರ ಪತ್ರ.

*****

**ಪ್ರಸ್ತಾವನೆ:**

ಮೆಷಿನ್ ಇಂಟೆಲಿಜೆನ್ಸ್ ಮತ್ತು ರೊಬೋಟಿಕ್ ಅಭಿವೃದ್ಧಿಯು ಭವಿಷ್ಯದ ತಂತ್ರಜ್ಞಾನ ಆಗಿರುವುದರಿಂದ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಡೇಟಾ ಅನಾಲಿಟಿಕ್ಸ್ ಅಳವಡಿಸಿಕೊಳ್ಳುವಂತೆ ಕರ್ನಾಟಕ ಜ್ಞಾನ ಆಯೋಗವು ಗುರುತಿಸಿರುವ ಹಿನ್ನೆಲೆಯಲ್ಲಿ, 2017–18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಬೆಂಗಳೂರಿನ ಅಂತಾರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ–ಬಿ)ಯಲ್ಲಿ ಸೆಂಟರ್ ಫಾರ್ ಮೆಷಿನ್ ಇಂಟೆಲಿಜೆನ್ಸ್ ಮತ್ತು ರೊಬೋಟಿಕ್ಸ್ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ಘೋಷಿಸಲಾಗಿರುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

2. ಸಾಂಪ್ರದಾಯಿಕ ಕಂಪ್ಯೂಟಿಂಗ್ ಕಾರ್ಯತಂತ್ರಗಳನ್ನು ಬಳಸಿ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಹೋಲಿಸಿದರೆ ಯಂತ್ರಗಳು ಚುರುಕಾಗಿ, ತ್ವರಿತವಾಗಿ, ದಕ್ಷತೆಯಿಂದ ಕಾರ್ಯ ನಿರ್ವಹಿಸುವಂತೆ ಮಾಡಲು ಮೆಷಿನ್ ಇಂಟಲಿಜೆನ್ಸ್ ಕ್ಷೇತ್ರವು ಮುಂಚೂಣಿಗೆ ಬರುತ್ತಿರುವುದಾಗಿ ತಿಳಿಸುತ್ತಾ, ಸರ್ಕಾರವು ಅತಿದೊಡ್ಡ ಗಾತ್ರದ ದತ್ತಾಂಶವನ್ನು ಹೊಂದಿರುವುದರಿಂದ ಡೇಟಾ ಕೋರಿಲೇಷನ್, ಡೇಟಾ ಪೇಟರ್ನ್ಸ್ ಹಾಗೂ ಡೇಟಾ ಸಿಮ್ಯುಲೇಷನ್, ಇತ್ಯಾದಿಗಳನ್ನು ಪಡೆಯಲು ಡೇಟಾ ಅನಾಲಿಟಿಕ್ಸ್ ಬಳಸಿಕೊಳ್ಳುವ ಮಹತ್ತರ ಸಾಮರ್ಥ್ಯವಿದ್ದು, ಇದರಿಂದ ಆಡಳಿತಕ್ಕೆ ಹಾಗೂ ಭವಿಷ್ಯದ ಯೋಜನೆ ರೂಪಿಸಿಕೊಳ್ಳಲು ಹೊಸ ಬೆಳಕನ್ನು ಚೆಲ್ಲಬಹುದಾಗಿದೆ ಎಂದು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕರು ತಿಳಿಸಿರುತ್ತಾರೆ.

3. ಬೆಂಗಳೂರಿನ ಐಐಐ–ಟಿ ಸಂಸ್ಥೆಯಲ್ಲಿ ಅನೇಕ ಶಿಕ್ಷಕರುಗಳಿದ್ದು, ಅವರು ಆಲ್ಗೊರಿಥಂ ಡಿಸೈನ್, ಆಪ್ಟಿಮೈಸೇಷನ್, ಮೆಷಿನ್ ಲರ್ನಿಂಗ್, ನಾಲೆಡ್ಜ್ ರೆಪ್ರೆಸೆಂಟೇಷನ್ ಮತ್ತು ರೀಸನಿಂಗ್, ಮೆಷಿನ್ ಪರ್ಸೆಪ್ಷನ್, ಮೆಖಾಟ್ರಾನಿಕ್ಸ್, ಕಾಗ್ನಿಟಿವ್ ಕಂಪ್ಯೂಟಿಂಗ್, ಹ್ಯೂಮನ್–ಮೆಷಿನ್ ಇಂಟರ್‌ಫೇಸ್, ರೊಬೋಟಿಕ್ಸ್ ಮತ್ತು ಆಟೊಮೇಷನ್‌ಗಳ ಕೈಗಾರಿಕಾ ಉತ್ಪನ್ನಗಳು ಮತ್ತಿತರ ಸಂಬಂಧಿತ ಕ್ಷೇತ್ರಗಳಿರುವ ಮೆಷಿನ್ ಇಂಟಲಿಜೆನ್ಸ್ ಮತ್ತು ರೊಬೋಟಿಕ್ಸ್‌ನ ಬಹುಪಾಲು ವಲಯಗಳ ಸಂಶೋಧನಾ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವವರಿದ್ದಾರೆ. ಆದುದರಿಂದ ಬೆಂಗಳೂರಿನ ಐಐಐ–ಟಿ ಸಂಸ್ಥೆಯಲ್ಲಿ ಸೆಂಟರ್ ಫಾರ್ ಮೆಷಿನ್ ಇಂಟಲಿಜೆನ್ಸ್ ಮತ್ತು ರೊಬೋಟಿಕ್ಸ್ ಕೇಂದ್ರವನ್ನು ಸ್ಥಾಪಿಸಲು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕರು ಸಲಹೆ ನೀಡಿರುತ್ತಾರೆ.

4. ಪ್ರಸ್ತಾವಿತ ಕೇಂದ್ರವು ಮೆಷಿನ್ ಇಂಟಲಿಜೆನ್ಸ್, ಡೇಟಾ ಅನಾಲಿಟಿಕ್ಸ್, ಪ್ಯಾಟರ್ನ್ ರೆಕಗ್ನಿಷನ್, ರೊಬೋಟಿಕ್ಸ್ ಡೆವಲಪ್‌ಮೆಂಟ್, ಇತ್ಯಾದಿಗಳಿಗೆ ಸಂಬಂಧಿಸಿದ ವಲಯಗಳಲ್ಲಿ ಬಹುಮುಖ–ಪಠ್ಯಕ್ರಮದ ಸಂಶೋಧನಾಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಿದ್ದು, ಅಂತಹ ಪ್ರಮುಖವಾಗಿ ಗಮನವಿಡುವ ವಲಯಗಳೆಂದರೆ ಸೆನ್ಸಾರ್ ಟೆಕ್ನಾಲಜಿಗಳು, ಡೇಟಾ–ಸೆಂಟ್ರಿಕ್ ಸೆನ್ಸಾರ್‌ಗಳು, ರೊಬೋಟಿಕ್ಸ್ ಮತ್ತು ಆಟೊನೊಮಸ್ ಸಿಸ್ಟಮ್ಸ್, ಕೋಆಪರೇಟಿವ್ ಇಂಟಲಿಜೆನ್ಸ್ ಸಿಸ್ಟಮ್ಸ್, ಹ್ಯೂಮನ್–ಮೆಷಿನ್ ಇಂಟರಾಕ್ಷನ್, ಪ್ಯಾಟರ್ನ್ ರೆಕಗ್ನಿಷನ್, ಡೇಟಾ ಮೈನಿಂಗ್, ಕೊಲಾಬೊರೇಟಿವ್ ರೊಬೋಟಿಕ್ಸ್, ಮುಂತಾದವುಗಳಾಗಿರುತ್ತವೆ.

...2

5. ಸೆಂಟರ್ ಫಾರ್ ಮೆಷಿನ್ ಇಂಟಲಿಜೆನ್ಸ್ ಅಂಡ್ ರೊಬೊಟಿಕ್ಸ್ ಕೇಂದ್ರವನ್ನು ಸ್ಥಾಪಿಸಲು ಐಐಐಟಿ-ಬಿ ಸಂಸ್ಥೆಯು ಐದು ವರ್ಷಗಳ ಅವಧಿಗೆ ಅಂದಾಜು ವೆಚ್ಚವಾಗಿ ರೂ.57.62 ಕೋಟಿಗಳ ಪ್ರಸ್ತಾವನೆ ಸಲ್ಲಿಸಿದೆ. 2017-18ನೇ ಸಾಲಿನಲ್ಲಿ ಸದರಿ ಕೇಂದ್ರದ ಸ್ಥಾಪನೆಗಾಗಿ ರೂ.5.00 ಕೋಟಿಗಳು ವೆಚ್ಚವಾಗುವುದೆಂದು ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುತ್ತಾರೆ.

6. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 76 ಎಡಿಎಂ 2017, ಬೆಂಗಳೂರು, ದಿನಾಂಕ 04.07.2017</u>**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, 2017-18ನೇ ಸಾಲಿನಿಂದ ಬೆಂಗಳೂರಿನ ಐಐಐ-ಟಿ ಸಂಸ್ಥೆಯಲ್ಲಿ ಸೆಂಟರ್ ಆಫ್ ಮೆಷಿನ್ ಇಂಟಲಿಜೆನ್ಸ್ ಅಂಡ್ ರೊಬೊಟಿಕ್ಸ್ ಕೇಂದ್ರದ ಸ್ಥಾಪನೆಗಾಗಿ ಅನುಮೋದನೆ ನೀಡಲಾಗಿದೆ.

2. ಕೆಬಿಟ್ಸ್ ಸಂಸ್ಥೆಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಐಐಐಟಿ-ಬಿ ಸಂಸ್ಥೆಗೆ ರೂ.5.00 ಕೋಟಿಗಳಿಗೆ ಮೀರದ ಅನುದಾನವನ್ನು ಅದರ ಸಾಧನೆಗನುಗುಣವಾಗಿ ಮತ್ತು ಯಶಸ್ಸಿನ ಘಟ್ಟಗಳ ಆಧಾರವಾಗಿ ಕಂತುಗಳಲ್ಲಿ ಬಿಡುಗಡೆಗೊಳಿಸತಕ್ಕದ್ದು.

3. ಕೆಬಿಟ್ಸ್ ಸಂಸ್ಥೆ ಮತ್ತು ಐಐಐಟಿ-ಬಿ ನಡುವೆ ಒಪ್ಪಂದವೊಂದಕ್ಕೆ (MoA) ಸಹಿ ಹಾಕತಕ್ಕದ್ದು. ಅದರಲ್ಲಿ ಎರಡೂ ಸಂಸ್ಥೆಗಳ ಪಾತ್ರ, ಹೊಣೆಗಾರಿಕೆಗಳನ್ನು, ಅಂತೆಯೇ ಸಾಧನೆ ಮತ್ತು ಯಶಸ್ಸುಗಳ ಬಗ್ಗೆಯೂ ನಮೂದಿಸಿರತಕ್ಕದ್ದು. ಕೆಬಿಟ್ಸ್ ಸಂಸ್ಥೆ ಮತ್ತು ಐಐಐಟಿ-ಬಿ ಸಂಸ್ಥೆಯು ಅವಶ್ಯವಿದ್ದಾಗ ಕರ್ನಾಟಕ ಜ್ಞಾನ ಆಯೋಗದಿಂದ ಸಲಹೆಗಳನ್ನು ಪಡೆಯತಕ್ಕದ್ದು. ಇದಕ್ಕೆ ತಗಲುವ ವೆಚ್ಚವನ್ನು ಐಟಿ ಪಾಲಿಸಿಯಡಿಯಲ್ಲಿ ಸರ್ಕಾರವು ಕೆಬಿಟ್ಸ್ ಸಂಸ್ಥೆಗೆ ಬಿಡುಗಡೆಗೊಳಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

4/7

(ಸಿದ್ರಾಮಪ್ಪ ಹ. ತಳವಾರ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

<u>ಗೆ:</u>
ಸಂಕಲನಕಾರರು, ಕರ್ನಾಟಕ ವಾರ್ತಾಪತ್ರದ ವಿಶೇಷ ಗೆಜೆಟ್‌ನಲ್ಲಿ ಪ್ರಕಟಣೆಗಾಗಿ ಹಾಗೂ 200 ಪ್ರತಿಗಳ ಸರಬರಾಜು ಕೋರಿ.

<u>ಪ್ರತಿಗಳು:</u>

1) ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಎ), ಬೆಂಗಳೂರು.
2) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ
6) ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್, ಬೆಂಗಳೂರು
7) ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಬೆಂಗಳೂರು
8) ನಿರ್ದೇಶಕರು, ಐಐಐ-ಟಿ, ಬೆಂಗಳೂರು (ಕೆಬಿಟ್ಸ್ ಸಂಸ್ಥೆಯ ಮುಖಾಂತರ).
9) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು.
10) ಮಾನ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ.
11) ರಕ್ಷಾ ಕಡತ/ ಬಿಡಿ ಪ್ರತಿಗಳು.